ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ.1620/2021

ಪಿ.ಡಬ್ಲ್ಯೂ -2

ದಿಃ **21.08.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಜಗದೀಶ ಎನ್ |
| ತಂದೆ/ಗಂಡನ ಹೆಸರು | ಎಚ್. ವಿ ನಾಗಾರಜಯ್ಯ |
| ವಯಸ್ಸು | 57 ವರ್ಷ |
| ಕೆಲಸ | ಬ್ಯಾಂಕ್ ವ್ಯವಸ್ಥಾಪಕರು |
| ವಾಸಸ್ಥಳ | ಬಿಳಿಕೆರೆ ಗ್ರಾಮ |

**ಮುಖ್ಯ ವಿಚಾರಣೆ ದೂರುದಾರರ ಪರ ಶ್ರೀ ಎಮ್.ಆರ್.ಎಲ್ ಯವರಿಂದಃ**

ನಿಪಿ-**2** ರ ಮೆಮೋನ್ನು ನಮ್ಮ ಬ್ಯಾಂಕಿನಿಂದ ನೀಡಿರುತ್ತೇವೆ. ನಮ್ಮ ಬ್ಯಾಂಕಿಗೆ ಗುರುಪ್ರಸಾದ ಎಂಬುವವರು ಚೆಕ್ ನ್ನು ನೀಡಿದ್ದು ಸದರಿ ಚೆಕ್ ನ್ನು ನಮ್ಮ ಬ್ಯಾಂಕನಿಂದ ಮೈಸೂರಿನ ಎಸ್ ಬ್ಯಾಂಕ್ ಗೆ ಕಳುಹಿಸಿರುತ್ತೇವೆ. ಸದರಿ ಶಾಖೆಯವರು ಖಾತೆ ವ್ಯವಹಾರ ಮಾಡದೆ ಸ್ಥಗಿತ ಆಗಿರುತ್ತದೆಂದು ಹಿಂಬರಹವನ್ನು ನೀಡಿರುತ್ತಾರೆ. ಸದರಿ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-**10** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಎಸ್.ಎಂ. ವಕೀಲರಿಂದಃ**

ಪಿರ್ಯಾದುದಾರರು ಸುಮಾರು 15 ವರ್ಷದಿಂದ ನಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದಾರೆ. ಸದರಿಯವರು ನಿಮಗೆ ತುಂಬಾ ಪರಿಚಯಸ್ತರು ಎಂದರೆ ಸಾಕ್ಷಿ ಅವರು ನಮ್ಮ ಗ್ರಾಹಕರು ಎಂದು ನುಡಿಯುತ್ತಾರೆ. ಆರೋಪಿ ಪಿರ್ಯಾದುದಾರರಿಗೆ ಯಾವುದೇ ಚೆಕ್ ನ್ನು ನೀಡದೇ ಇದ್ದರೂ, ಪಿರ್ಯಾದುದಾರರು ಸೃಷ್ಟಿಸಿಕೊಂಡ ಚೆಕ್ ಗೆ ನಾನು ಸುಳ್ಳು ಹಿಂಬರಹ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ, ಪಿರ್ಯಾದುದಾರರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.